**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 29.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ಚೆನ್ನಯ್ಯ ಎಂಬುವವರ ಮರಣ ಪ್ರಮಾಣಪತ್ರದ ದೃಢೀಕರಿಸಿದ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.49 ಎಂದು, ವಂಶವೃಕ್ಷದ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.50 ಎಂದು, ಪ್ರತಿವಾದಿಗಳಿಗೆ ಸೇರಿದ 6 ಆಧಾರ ಕಾರ್ಡಗಳ ಅಸಲು ಪ್ರತಿ ಹಾಗೂ ನೋಟರೈಜ್ಡ ಪ್ರತಿಗಳನ್ನು ಹಾಜರಪಡಿಸಿದ್ದು ಅಸಲು ದಾಖಲೆಗಳ ಜೊತೆ ನೋಟರೈಜ್ಡ ಪ್ರತಿಗಳನ್ನು ತಾಳೆ ಮಾಡಿ ನೋಡಿ ನೋಟರೈಜ್ಡ ಪ್ರತಿಗಳನ್ನು ಕ್ರಮವಾಗಿ ನಿಡಿ.51 ರಿಂದ 56 ಎಂದು, ಒಂದು ಮ್ಯೂಟೇಶನ್ ರಜಿಸ್ಟರ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.57 ಎಂದು, 6 ಪಹಣಿ ಪತ್ರಿಕೆಗಳನ್ನು ಹಾಜರಪಡಿಸಿದ್ದು ಸದರಿ ದಾಖಲೆಗಳನ್ನು ಕ್ರಮವಾಗಿ ನಿಡಿ.58 ರಿಂದ 63 ಎಂದು ಗುರುತಿಸಲಾಯಿತು.

**(ಪಾಟೀ ಸವಾಲುಃ ವಾದಿ ಪರ ವಕೀಲರನ್ನು ಕೂಗಿ ಕರೆಸಲಾಗಿ ಅವರು ನ್ಯಾಯಾಲಯದಲ್ಲಿ ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**